**ಸಾಕ್ಷಿಯನ್ನು ದಿಃ 25.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ನಾನು ವಿಧ್ಯಾಭ್ಯಾಸ ಮಾಡಿಲ್ಲ. ನಾನು ಕಾರಮೊಳೆ ಗ್ರಾಮ, ನಂಜನಗೂಡಿನಲ್ಲಿ ವಾಸ ಮಾಡುತ್ತೇನೆ. ನಾನು ಈ ದಿನ ನ್ಯಾಯಾಲಯಕ್ಕೆ ಬಸ್ಸಿನಲ್ಲಿ ಬಂದಿರುತ್ತೇನೆ. ಆ ದಿನ ನಾನು ಅಪಘಾತದ ಸ್ಥಳದಲ್ಲಿ ಕೂಲಿಗಾಗಿ ಬಂದಿದ್ದೆ. ನಾನು ಮೈಸೂರಿನಲ್ಲೇ ಕೂಲಿಗಾಗಿ ವಾಸ ಇದ್ದೇನೆ. ಆ ದಿನ ನನ್ನೊಂದಿಗೆ ನಮ್ಮ ಹುಡುಗರು ಇಬ್ಬರು ಇದ್ದರು. ಆ ದಿನ ಅಪಘಾತ ಪಡಿಸಿದ ಬೈಕ್ ಸವಾರ ನನಗೆ ಪರಿಚಿತನಲ್ಲ. ನನ್ನನ್ನು ಕಾವೇರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಒಂದು ವಾರ ಚಿಕಿತ್ಸೆ ಪಡೆದಿದ್ದೇನೆ. ಮಂಜುನಾಥ್ ಎಂಬ ವೈಧ್ಯರು ಚಿಕಿತ್ಸೆ ನೀಡಿದ್ದಾರೆ. ಬೇರೆ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗಿಲ್ಲ. ಈಗಲೂ ಪ್ರತಿ ತಿಂಗಳು ಅದೇ ವೈಧ್ಯರಲ್ಲಿಗೆ ಹೋಗುತ್ತಿದ್ದೇನೆ. ಆಸ್ಪತ್ರೆಗೆ ಹೋದಾಗ ನನಗೆ ಪ್ರಜ್ಞೆ ಇತ್ತು. ಆಸ್ಪತ್ರೆಯಲ್ಲಿ ವೈಧ್ಯರಿಗೆ ನಾನೇ ಗಾಯಗಳ ಬಗ್ಗೆ ಹೇಳಿದ್ದೇನೆ. ಚಿಕಿತ್ಸೆ ನೀಡಿದಾಗ ಅಪಘಾತ ಆಗಿ 8 ಗಂಟೆ ಆಗಿತ್ತು. ಆಸ್ಪತ್ರೆಯಲ್ಲಿ ನನ್ನ ಹೆಂಡತಿ ಜೊತೆಯಲ್ಲಿದ್ದರು. ದೂರನ್ನು ಪೋಲೀಸರಿಗೆ ನನ್ನ ಹೆಂಡತಿ ಕೊಟ್ಟಿದ್ದಾರೆ.

2. ನನಗೆ ತಿಂಗಳಿಗೆ ರೂ.40,000/- ಆದಾಯ ಇತ್ತು ಎಂದು ಸುಳ್ಳು ಹೇಳ್ತುತ್ತಿದ್ದೇನೆ ಎಂದರೆ ಸರಿಯಲ್ಲ. ಔಷಧಿ ಬಾಬ್ತು ಮೂರು ಲಕ್ಷ ಖರ್ಚಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇತರೆ ಬಾಬ್ತು ಖರ್ಚು ಮಾಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ರಿಂಗ್ ರಸ್ತೆಯಲ್ಲಿ ಆಗಿದೆ ಎಂದರೆ ಸರಿ. ನಾನು ರಸ್ತೆ ದಾಟುವ ಸ್ಥಳದಲ್ಲಿ ಜೀಬ್ರಾ ಕ್ರಾಸಿಂಗ್ ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನನಗೆ ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ನಿಪಿ. 8 ಒಂದೇ ಔಷಧಿ ಬಿಲ್ಲನ್ನು ಹಾಜರು ಪಡಿಸಿದ್ದೇನೆ ಎಂದರೆ ಗೊತ್ತಿಲ್ಲ. ನಾನು ಹಾಜರು ಪಡಿಸಿದಾದ ಬಿಲ್ಲಿನಷ್ಟು ಹಣ ಖರ್ಚಾಗದಿದ್ದರೂ ಪರಿಹಾರಕ್ಕಾಗಿ ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತ ನನ್ನ ತಪ್ಪಿನಿಂದ ಆಗಿದೆ ಬೈಕ್ ಸವಾರನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನಾನು ರಸ್ತೆ ದಾಟಲು ಆಚೆ ಈಚೆ ಗಮನಿಸದೇ ಏಕಾಏಕಿ ರಸ್ತೆಗೆ ನುಗ್ಗಿದ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಸರ್ವೀಸ್ ರಸ್ತೆಯನ್ನು ಬಿಟ್ಟು ನಾನು ಮುಖ್ಯ ರಸ್ತೆಗೆ ಬಂದ ಕಾರಣ ಅಪಘಾತ ಆಗಿದೆ ಎಂದರೆ ಸರಿಯಲ್ಲ. 1 ನೇ ಎದುರುದಾರರೇ ನನ್ನನ್ನು ಆಸ್ಪತ್ರೆಗೆ ಸೇರಿಸಿದ್ದಾರೆ ಎಂದರೆ ನನ್ನ ತಮ್ಮ ಸಹ ಇದ್ದರೂ ಎನ್ನುತ್ತಾರೆ. ನನ್ನ ಆದಾಯದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ನಾನು ನನಗೆ ಖರ್ಚಾದ ಬಗ್ಗೆ ಎಲ್ಲಾ ಔಷಧಿ ಬಿಲ್ಲುಗಳನ್ನು ಹಾಜರು ಪಡಿಸಿದ್ದೇನೆ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.